
ರಜಿಯಾ, ‘ಈಗಾಗ್ಲೇ ತುಂಬಾನೆ ಕೆಲ್ಸ ಮಾಡ್ತಿದ್ದೇವೆ, ನಿಮ್ಗೆ ನಂ ಕೆಲ್ಸದ ಸರೀ ಜ್ಞಾನ ಇಲ್ಲ ಅನಸ್ತದೆ’ ಅಂದಾಗ ನಾನು, ‘ಹೌದು ಹೌದು ಕ್ಷಮಿಸಿ, ನಿಮ್ಮ ಸಂಸ್ಥೆ ಬಗ್ಗೆ ನನಗಷ್ಟು ಜ್ಞಾನ ಇಲ್ಲ’ ಅನ್ನುವುದರ ಮೂಲಕ ಆ ವಿಚಾರಕ್ಕೆ ಅಲ್ಲೇ ತೆರೆ ಬಿತ್ತು.

ಚಹದ ಕಾರ್ಯಕ್ರಮ ಮುಗಿಯಿತೆಂದು ಅನಿಸಿದ್ದೇ ಮೇಡಂ ಪುನಃ ಆರಂಭಿಸಿದರು. ‘ಇಲ್ಲಿ ಬರೆದುಕೊಂಡದ್ದೆಲ್ಲ ಸತ್ಯವೋ ಅಥವಾ ಯಾರಾದರೂ ಬೆದರಿಕೆ ಹಾಕಿದ್ದಕ್ಕೆ ಆ ವ್ಯಕ್ತಿಯ ಮೇಲೆ ಸುಳ್ಳು ಆರೋಪ ಮಾಡ್ತ ಇದ್ದೀಯೋ?’ ‘ನಡೆದಿದ್ದೇ ಹೇಳ್ತಿದ್ದೇನೆ ಮೇಡಂ, ಖುದಾ ಕಿ ಕಸಮ್, ಸುಳ್ಳು ಆರೋಪ ಅಲ್ಲ.’ ‘ಇದಕ್ಕೆಲ್ಲ ಸಾಕ್ಷಿ ಏನು?’ ‘ಕೊಟ್ಟಿದ್ದೇನಲ್ಲ ಮೇಡಂ ದೂರಿನ ಸಂಗಡದಲ್ಲೇ.’ ‘ಏನು ಸಾಕ್ಷಿಗಳು? ಅಬಾರ್ಷನ್ ಆಗಿದೆ ಅಂತ ಬರೆದಿದ್ದೀಯಲ್ಲ? ಅದರ ಸರೀ ಸಾಕ್ಷಿಯಿಲ್ಲ’ ‘ಯಾಕಿಲ್ಲ? ಅಲ್ಲೇ ಇದೆ ನೋಡಿ ಮೇಡಂ, ಡಾಕ್ಟರ್ ಗುಳಿಗೆ ಬರೆದುಕೊಟ್ಟ ಚೀಟಿ.’



‘ಕೇವಲ ಗುಳಿಗೆ ಬರಕೊಟ್ಟ ಚೀಟಿ ಇದ್ದರೆ ಸಾಲದು, ಅಬಾರ್ಷನ್ ಯಾವ ಕ್ಲಿನಿಕ್ಕಿನಲ್ಲಿ ಮಾಡಿಸಿಕೊಂಡಿ? ನೀನು ಯಾವ ಆಸ್ಪತ್ರೆಗೆ ಅಡ್ಮಿಟ್ ಆಗಿದ್ದೀ? ಯಾವ ಡಾಕ್ಟರ್ ಅಬಾರ್ಷನ್ ಮಾಡಿದರು? ಡಿಸ್ಚಾರ್ಜ್ ಅಥವಾ ಅಡ್ಮಿಟ್ ಆದ ರಶೀದಿ ಬೇಕು.’ ‘ಅಂಥದೇನಿಲ್ಲ ಮೇಡಂ, ಹಮೀದ್ ಜೊತೆ ಇದ್ದಾಗನೇ ಮೂರು ತಿಂಗ್ಳು ನನಗ ಮುಟ್ಟಾಗಿದ್ದಿಲ್ಲ, ಹೊಟ್ಟೀ ಒಳಗ ಸಂಕಟ ಆಗ್ತಿತ್ತು, ಆ ಟೈಮ್‌ದಾಗೆ ನಾ ಮತ್ತ ಕೆಲ್ಸ ಕೇಳಾಕ ಫ್ಯಾಕ್ಟರೀಗೆ ಹೋಗಿದ್ದೆ, ಹೊಡದ ಗಾಯಕ್ಕ ಬ್ಯಾಂಡೇಜ ಹಾಕಸ್ತೆವಿ ಅಂತ ಅವರೇ ಕಾರಿನ್ಯಾಗ ಒಯ್ದು ಅಡ್ಮಿಟ್ ಮಾಡಿಸಿದ್ರು, ಆ ನಂತ್ರ ಹೋಗಿ ಕೇಳಿದೆ, ಡಾಕ್ಟರ್ ಅವೆಲ್ಲ ಸಾಕ್ಷಿ ಇಟ್ಕೊಂಡ್ರ ನಾವು ಜೈಲಿಗೆ ಹೋಗಬೇಕಾಕ್ಕೇತಿ ಅಂದ್ರು.’ ‘ನೀನು ಹಮೀದನ ಜೊತೆ ಅಷ್ಟು ಮುಂದುವರೆಯೋ ಮೊದ್ಲೇ ಇವೆಲ್ಲ ಯೋಚಿಸಬೇಕಿತ್ತಮ್ಮ’ ಅಂದರು ಮೇಡಂ. ‘ಅವರೇ ನನ್ನ ಮೈಮೇಲೆ ಬಿದ್ದು ಗೆಳೆತನ ಮಾಡಿದ್ದು ಮೇಡಂ. ಅವರೇ ನನ್ನ ಹಿಂದೆ ಬಿದ್ದದ್ದು, ಅವರೇ ನನ್ನ ಮಗನನ್ನು ಎತ್ತಿ ಮುದ್ದಾಡಿದ್ದು. ಅವರೇ ತನ್ನ ಅಬ್ಬಾಜಾನ್ ಅಂತ ನನ್ನ ಕೂಸು ನಂಬಿಕೊಂಡಾನೆ’ ಅನ್ನುತ್ತ ಗದ್ಗದಿತ ಕಂಠದಿಂದ ಸಬೀನಾ ಹೇಳುತ್ತಿದ್ದಳು. ಎಲ್ಲ ಖಾಸಗೀತನವನ್ನೂ ಸಾರ್ವಜನಿಕವಾಗಿ ಹೊರಚೆಲ್ಲಿ ಒಂದು ರೀತಿಯಲ್ಲಿ ಬೆತ್ತಲಾದ ಭಾವ ಆವರಿಸಿಕೊಳ್ಳುತ್ತಲೇ, ಲೈಂಗಿಕತೆಯ ಸೂಕ್ಷ್ಮ ಎಳೆಗಿರುವ ಲಜ್ಜೆಯನ್ನು ಪಿಸಿಪಿಸಿದು ತೆರೆದಿಟ್ಟ ಅಸಹ್ಯದ ಜೊತೆ ಕುತೂಹಲವನ್ನೂ ಒತ್ತರಿಸಿ ತರುವ ಸ್ಥಿತಿ ಮೀಟಿಂಗ್ ಕೊಠಡಿಯಲ್ಲೇ ನಿರ್ಮಾಣಗೊಂಡು ಎಂಥದೋ ಖಾಲಿಯಾದ ಭಾವದಲ್ಲಿ ಮೀಯುತ್ತಿರುವಂತೆ ಭಾಸವಾಗುತ್ತ ಹೋದ ಹಾಗೆ ನಾನು ಯಾರನ್ನೂ ದಿಟ್ಟಿಸದೇ ತಲೆ ತಗ್ಗಿಸಿದೆ.

‘ಈಗ ಏನು ಮಾಡ್ಬೇಕು ಮೇಡಂ ನಾನು?’ ‘ಅವರು ನಿನಗೆ ಮಾನಸಿಕ, ಲೈಂಗಿಕ ಕಿರುಕುಳ ಕೊಟ್ಟ ಬಗ್ಗೆ ಬೇರೆ ಸಾಕ್ಷಿ ಏನಾದ್ರೂ ಇದೆಯಾ?’ ‘ಬೇರೆ ಅಂದ್ರೆ ಮೇಡಂ?’